ಕಾಣಿಸಿಕೊಳ್ಳುವ ನಾನಾ ರೀತಿಯ ಅಂಟು ಜಾಡ್ಯಗಳು ಉಲ್ಬಣಗೊಂಡು ಜನರ ಜೀವಕ್ಕೆ ಅಪಾಯ ತರುವ ಪ್ರಕರಣಗಳು ಕಂಡುಬರುತ್ತಿವೆ. ಈ ಕೂಡಲೇ ಸರ್ಕಾರ ಸಮರೋಪಾದಿಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಅಲ್ಲದೇ ರೋಗ ಪೀಡಿತರಿಗೆ ವಿಶೇಷ ಆರೈಕೆ, ಔಷಧಿಗಳ ವಿತರಣೆ, ಚಿಕಿತ್ಸೆಗೆ ಸ್ಪಂದಿಸಿ ರೋಗಿಗಳ ಆತಂಕವನ್ನು ನಿವಾರಿಸಬೇಕಾಗಿರುತ್ತದೆ. ಇಂಥ ಆತಂಕದ ಗಂಭೀರವಾದ ಸಾರ್ವಜನಿಕ ಮಹತ್ವವಾಗಿರಕ್ಕಂಥ ಈ ಒಂದು ವಿಷಯದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆಯೆನ್ನುವುದನ್ನು ತಮ್ಮ ಮೂಲಕ ಕೇಳಿ ವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಯು.ಟಿ.ಖಾದರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಇವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಈ ಇಲ್ಲಿ ಇಲ್ಲ. ಅವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ detailed ಉತ್ತರವನ್ನು ಕಳುಹಿಸಿಡುತ್ತೇವೆ. ಆದರೆ ಮಾನ್ಯ ಸದಸ್ಯರೆ, ತಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿತಕ್ಕಂಥ ವಿಚಾರಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಅದು ಸರ್ಕಾರದ ಗಮನದಲ್ಲಿದೆ. ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳವೇಕೋ ಅದನ್ನು ತೆಗೆದುಕೊಂಡು ಅದನ್ನು ನಿಯಂತ್ರಣದಲ್ಲಿಡುವುದಕ್ಕೆ ಅಗತ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದೆ. ಇದಕ್ಕೆ ಸಮಗ್ರವಾದ ಉತ್ತರವನ್ನು ನಾನು ಕೊಡಿಸಿಕೊಡುತ್ತೇನೆ.

8. ವಿಷಯ : ಮಾಯಕೊಂಡ ಕ್ಷೇತ್ರಕ್ಕೆ ಬೋರ್‌ವೆಲ್, ನೀರಾವರಿ, ರಸ್ತೆ, ಸಮುದಾಯ ಭವನಕ್ಕೆ ವಿಶೇಷ ಹಣ ಸಹಾಯ ಮಾಡುವ ಬಗ್ಗೆ.

ಅಧ್ಯಕ್ಷರು: ಮಾನ್ಯ ಕೆ. ಶಿವಮೂರ್ತಿಯವರೆ, ತಾವು ಪ್ರಶ್ನೆಯನ್ನು ಕೇಳಿದ್ದೀರಿ. ಅದರಲ್ಲಿ ಮೊದಲನೆಯದಾಗಿ ಬೋರ್‌ವೆಲ್, ಎರಡನೆಯದಾಗಿ ನೀರಾವರಿ ವಿಚಾರ, ಮೂರನೆಯದಾಗಿ ರಸ್ತೆ ವಿಚಾರ, ನಾಲ್ಕನೆಯದಾಗಿ ಸಮುದಾಯ ಭವನದ ವಿಚಾರವಿದೆ. ಇವೆಲ್ಲವುಗಳಿಗೆ ಯಾರು ಉತ್ತರ ಕೊಡಬೇಕು?

ಶ್ರೀ ಕೆ.ಶಿವಮೂರ್ತಿ(ಮಾಯಕೊಂಡ): ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಮೀಸಲು ಕ್ಷೇತ್ರಕ್ಕೆ

ಅಧ್ಯಕ್ಷರು: ಮೊದಲು ಇಲ್ಲಿ ಕೇಳಿ. ನೀವು ಸೀನಿಯರ್ ಮೆಂಬರ್ ಆಗಿದ್ದೀರಿ. ಯಾವ ಇಲಾಖೆಗೆ ಕೇಳಬೇಕೋ ಅಂಥ ಪ್ರಶ್ನೆಯನ್ನು ಬೇರೆ ಬೇರೆಯಾಗಿ ಕೇಳಬೇಕು.

ಶ್ರೀ ಕೆ. ಶಿವಮೂರ್ತಿ: ಇವೆಲ್ಲವನ್ನೂ ಒಟ್ಟಿಗೆ ಏಕೆ ಕೇಳಿದೆನೆಂದರೆ, ನೇರವಾಗಿ ಆಯಾ ಕ್ಷೇತ್ರಕ್ಕೆ ಅವರ ಇಲಾಖೆಯಿಂದಲೇ ಬರುವುದು.

ಅಧ್ಯಕ್ಷರು: ನಾನು ಹೇಳುವುದನ್ನು ನೀವು ಕೇಳುವುದಕ್ಕೆ ತಯಾರಿ ಲ್ಲವೆಂದರೆ ಬಿಡಿ. ಯಾವ ಮಂತ್ರಿಗಳು ಉತ್ತರ ಕೊಡುತ್ತಾರೋ ಕೇಳಿ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಈಗಾಗಲೇ ನೀರಾವರಿ ಬಗ್ಗೆ ಬೋರ್‌ವೆಲ್‌ಗಳನ್ನು ಸೆಲೆಕ್ಟ್ ಮಾಡಿದ್ದಾರೆ. ಟೆಂಡರ್ ಆಗಿಲ್ಲವೆನ್ನುವ ಮಾತನ್ನು ಹೇಳುತ್ತಿರುವುದರಿಂದ ಎರಡ್ಮೂರು ವರ್ಷಗಳಿಂದ ಬೋರ್‌ವೆಲ್ ಹಾಕದಿರುವುದರಿಂದ ಜನರಿಗೆ ತೊಂದರೆಯಾಗಿದೆ. ಈಗ ಬರಗಾಲ ಬೇರೆ ಬಂದಿದೆ. ಪ್ರತಿ ದಿವಸ ಅಲ್ಲಿಯ ಬಡವರು ಆಫೀಸಿಗೆ ಅಲೆಯುತ್ತಿದ್ದಾರೆ. ಎಸ್.ಸಿ. ಕಾರ್ಪೊರೇಷನ್, ಎಸ್.ಟಿ ಕಾರ್ಪೊರೇಷನ್, ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೊರೇಷನ್‌ಗಳು ಅವರ ಕೆಲಸ ವನ್ನೇ ಮಾಡುತ್ತಿಲ್ಲ. ಇಲ್ಲಿ ರಾಜ್ಯಮಟ್ಟದ ಟೆಂಡರ್ ಆಗಿಲ್ಲ, ಆದುದರಿಂದ ಅಲ್ಲಿ ಬೋರ್‌ವೆಲ್ ಹಾಕುವುದಿಲ್ಲವೆಂದು ಹೇಳುತ್ತಿಲ್ಲ. ಕೆಲವು ಐಟಂಗಳಲ್ಲಿ ನೇರವಾಗಿ ದುಡ್ಡು ರಿಲೀಸಾಗಿ ಅಲ್ಲಿ ಇಲಾಖೆಗೆ ನಮಗೆ ಗೊತ್ತಿಲ್ಲದೇ ಹೋಗಿ ಬಿಡುತ್ತಿದೆ. ಈ ರೀತಿಯಾಗುತ್ತಿದೆ. ಅದಕ್ಕೋಸ್ಕರ ವಿಶೇಷವಾಗಿ ನೀವು ನೀರಾವರಿ ಬಗ್ಗೆ ಹಣವನ್ನು ಕೊಡುತ್ತಿರಾ ಎಂಬ ಬಗ್ಗೆ ಹೇಳಬೇಕು. ರಾಜ್ಯಮಟ್ಟದಲ್ಲಿ ಟೆಂಡರ್ ಹಾಕಿಲ್ಲವೆಂದು ಹೇಳಿ ಕಳೆದ ಎರಡ್ಮೂರು ವರ್ಷಗಳಿಂದ ಬೋರವೆಲ ಹಾಕದೇ ಕುಳಿತಿದ್ದಾರೆ. ಟೆಂಡರ್ ಏಜೆನ್ಸಿಯ ವ್ಯತ್ಯಾಸದಿಂದ ನೇರವಾಗಿ ನಮ್ಮ ಕ್ಷೇತ್ರಕ್ಕೆ, ನಮ್ಮ ಊರುಗಳಿಗೆ ತಲುಪುತ್ತಿಲ್ಲ.

ಅದಕ್ಕೋಸ್ಕರ ಈ ಪ್ರಶ್ನೆಯನ್ನು ಹಾಕಿದ್ದೇನೆ. ದಯವಿಟ್ಟು ಇದಕ್ಕೆ ಯಾವ ರೀತಿ ರಿಲ್ಯಾಕ್ಸ್ ಮಾಡುತ್ತೀರಿ ಎಂದು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಇದರ ಪರವಾಗಿ): ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿರ ತಕ್ಕಂಥ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಿಕೊಡುತ್ತೇನೆ.

9. ವಿಷಯ : ಪೂನಾ ಬೆಂಗಳೂರು ರಾಜ್ಯ ಹೆದ್ದಾರಿಯ ಹುಬ್ಬಳ್ಳಿ ಮುಖ್ಯ ದ್ವಾರದಲ್ಲಿ ಕಾನೂನು ಬಾಹಿರವಾಗಿ ಕಟ್ಟಡಗಳನ್ನು ನಿರ್ಮಿಸಿರುವ ಬಗ್ಗೆ.

ಶ್ರೀ ಪ್ರಸಾದ್ ಅಬ್ಬಯ್ಯ (ಹುಬ್ಬಳ್ಳಿ–ಧಾರವಾಡ–ಪೂರ್ವ): ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದ ಬಿ.ಬಿ.ರೋಡ್, ಮುನಸೋಳಿ ಲಕ್ಷ್ಮೇಶ್ವರ ರಾಜ್ಯ ಹೆದ್ದಾರಿ–73 ಮುಖ್ಯ ರಸ್ತೆಯ ಮುಖ್ಯ ದ್ವಾರದಲ್ಲಿ ಕಾನೂನು ಬಾಹಿರವಾಗಿ ವಾಣಿಜ್ಯ ವ್ಯಾಪಾರ ದೃಷ್ಟಿಯಿಂದ ತಾತ್ಕಾಲಿಕ ಶೆಡಗಳು ಎಂದರೆ ಡಾಬಾ ಅಂಗಡಿ, ಹೊಟೇಲ್‌ಗಳನ್ನು ಮತ್ತು ಕೆಲವು ಆರ್‌ಸಿಸಿ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದರಿಂದ ನಗರ ಸೌಂದರ್ಯಕ್ಕೆ ಧಕ್ಕೆಯಾಗಿರುತ್ತದೆ. ಈ ಸ್ಥಳ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವುದರಿಂದ ನಾನು ಅನೇಕ ಬಾರಿ ಮಹಾನಗರ ಪಾಲಿಕೆಯ ಅಧಿಕಾರಗಳ ಗಮನಕ್ಕೆ ತಂದಿದ್ದೇನೆ. ಅಲ್ಲಿಗೆ ಕಮಿಷನರ್‌ರವರನ್ನು ಕೂಡ ಕರೆದುಕೊಂಡು ಹೋಗಿ ಭೇಟಿ ಮಾಡಿಸಿದ್ದೇನೆ. ಅದಲ್ಲದೆ ಜಿಲ್ಲಾಧಿಕಾರಿಗಳು ಮತ್ತು ಉಸ್ತುವಾರಿ ಸಚಿವರ ಗಮನಕ್ಕೆ ಕೂಡ ತೆಗೆದುಕೊಂಡು ಬಂದಿದ್ದೇನೆ. ಅವರೂ ಕೂಡ ಆದೇಶ ಮಾಡಿದ್ದಾರೆ. ಆದರೂ ಕೂಡ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅದಕ್ಕಾಗಿ ಇದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು.